## ಗೂಗಿ ವಾ ಥಿಯಾಂಗೊ ಕಾದಂಬರಿ 'ಅಳಬೇಡ ಕಂದ'

# ಆಫ್ರಿಕಾದ ಸ್ಥಿತಿಗತಿಯ ನೈಜ ಚಿತ್ರಣ

● ಎಚ್. ದಂಡಪ್ಪ

ಗೂಗಿ ವಾ ಥಿಯಾಂಗೊ ಜಾಗತಿಕ ಸಾಹಿತ್ಯದ ಸಂದರ್ಭದಲ್ಲಿ ತನ್ನ ಅಸಾಧಾರಣ ವ್ಯಕ್ತಿತ್ವ ಮತ್ತು ಪ್ರತಿಭೆಯಿಂದ ಮುಖ್ಯರಾಗಿದ್ದಾರೆ. ಚಿನುವಾ ಅಚಿಬೆಯಂತೆ ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯವಾಗಿರುವ ಇವರ ಕೃತಿಗಳನ್ನು ವಿವಿಧ ಲೇಖಕರು ಕನ್ನಡಕ್ಕೆ ಅನುವಾದಿಸಿದ್ದಾರೆ ಮತ್ತು ಕೆಲವು ಚಿಂತಕರು ಇವರ ಬಗೆಗೆ ಬರೆದಿದ್ದಾರೆ. ಈಗ ಲೇಖಕ, ಅನುವಾದಕ ಸಿ. ನಾಗಣ್ಣ ಅವರು ಗೂಗಿ ಅವರ ಕಾದಂಬರಿ 'ವೀಪ್ ನಾಟ್, ಚೈಲ್ಡ್' ಅನ್ನು 'ಅಳಬೇಡ ಕಂದ' ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಗೂಗಿ ಅವರ ಮುಖ್ಯವಾದ ಕಾದಂಬರಿಗಳು: 'ದಿ ರಿವರ್ ಬಿಟ್ವೀನ್', 'ಎ ಗ್ರೈನ್ ಆಫ್ ವೀಟ್', 'ಡೆವಿಲ್ ಆನ್ ದಿ ಕ್ರಾಸ್', 'ವಿಜಾರ್ಡ್ ಆಫ್ ದಿ ಕ್ರೌಜೋ'. ಜೊತೆಗೆ ನಾಟಕ, ಸಾಹಿತ್ಯ, ಸಂಸ್ಕೃತಿ, ರಾಜಕೀಯ – ಇತ್ಯಾದಿಗಳ ಸಾಂಸ್ಕೃತಿಕ ಸ್ವರೂಪಗಳ ವಿಶ್ಲೇಷಣಾ ಬರಹಗಳನ್ನೂ ಬರೆದಿದ್ದಾರೆ. ಇವರ ಬಹು ಚರ್ಚಿತ ಲೇಖನಗಳನ್ನು ಕನ್ನಡದ ಮುಖ್ಯ ಲೇಖಕರು ಅನುವಾದಿಸಿದ್ದಾರೆ.

ಗೂಗಿಯವರ ಕೃತಿಗಳಲ್ಲಿ ಆಫ್ರಿಕಾದ ಸಂಸ್ಕೃತಿಯ ಮೇಲೆ ವಸಾಹತುಶಾಹಿಯ, ಅಂದರೆ ಯುರೋಪಿನ ಸಾಂಸ್ಕೃತಿಕ ಪ್ರಭಾವ ಮತ್ತು ಪರಿಣಾಮ ಯಾವ ರೀತಿಯಲ್ಲಾಗಿದೆ? ಅದನ್ನು ಬಿಡಿಸಿಕೊಳ್ಳುವುದು ಹೇಗೆ? ಸ್ವಂತಿಕೆಯನ್ನು ತಂದುಕೊಳ್ಳುವುದು ಹೇಗೆ? ಎಂಬ ವಿಚಾರಗಳು ಒಂದು ಒಳದಾರಿಯಾಗಿ ಹರಿಯುತ್ತವೆ. ಗೂಗಿಯವರ ಈ ಕಾದಂಬರಿಯು 'ಮೌಮೌ ಚಳವಳಿ'ಯ ಹಿನ್ನೆಲೆಯಲ್ಲಿ ರಚನೆಯಾಗಿರುವಂತಹದ್ದು. ಕೀನ್ಯಾವು ಹದಿನಾರನೇ ಶತಮಾನದಿಂದ ಅರಬ್ಬರು, ಪೋರ್ಚುಗೀಸರು ಹಾಗೂ ಬ್ರಿಟಿಷರ ವಿರುದ್ಧ ಸತತವಾಗಿ ಹೋರಾಟ ನಡೆಸಿಕೊಂಡು ಬಂದಿದೆ. ಹತ್ತೊಂಬತ್ತನೇ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಬುಕುಯಿ ಸಮುದಾಯ ವಿರೋಚಿತ ಹೋರಾಟ ನಡೆಸಿತು. ಬ್ರಿಟಿಷರ ಒಡೆದು ಆಳುವ ನೀತಿಯ ವಿರುದ್ಧ ಒಂದು ದೊಡ್ಡ ಹೋರಾಟ ನಡೆಯಿತು. ಇದರ ಜೊತೆಗೆ ಕೀನ್ಯಾದ ಭೂ ಸ್ವಾತಂತ್ರ್ಯ ಸೈನಿಕ ಸಂಘಟನೆಯ ಸದಸ್ಯರಿಂದ 'ಮೌಮೌ' ಎಂದೇ ಕರೆಯುತ್ತಿದ್ದ ಹೋರಾಟವೂ ಸೇರಿಕೊಂಡಿತು. ಈ ಸದಸ್ಯರ ತಂಡದ ನಾಯಕ ದೇದಾನ್ ಕಿಮತಿ. ಇದಕ್ಕೆ ವ್ಯತಿರಿಕ್ತವಾಗಿ ಸೆಲ್‌ಔಟ್ (ಮಾರಿಕೊಂಡವರು) ಎಂಬ ಒಂದು ವಂಚಕರ ಕರಿಯ ಗುಂಪೂ ಸಹ ಇತ್ತು. ಬಿಳಿಯರೊಡನೆ ಶಾಮೀಲಾಗಿ ಇವರು ಐಷಾರಾಮಿ ಜೀವನ ನಡೆಸುತ್ತಿದ್ದರು.

ಈ ಮೌಮೌ ಚಳವಳಿ ಕೀನ್ಯಾದಲ್ಲಿ ಸ್ವಾತಂತ್ರ್ಯಕ್ಕಾಗಿ ರಾಜಕೀಯ ಅರಿವು ಮೂಡಿಸುತ್ತಿದ್ದ ಒಂದು ಸಾಂಸ್ಕೃತಿಕ ಚಳುವಳಿ. ಸಾಹಿತಿಗಳು ಮೌಮೌ ಎಂಬ ಪ್ರಕಾರದಲ್ಲಿ ಬರೆಯುತ್ತಿದ್ದರು. ಇವರನ್ನು, ಅಂದರೆ ಇಂತಹ ಬರಹಗಾರನನ್ನು ಯಾವುದೇ ವಿಚಾರಣೆ ಇಲ್ಲದೆ ಜೈಲಿಗೆ ಕಳುಹಿಸುತ್ತಿದ್ದರು. ಇಲ್ಲವೇ ಕೊಲ್ಲುತ್ತಿದ್ದರು. ಇದು ಈಗಲೂ ಮುಂದುವರಿದಿದೆ.